ಆಧಾರಿತ ಹಿಂಸಾಚಾರ ಈ 21ನೇ ಶತಮಾನದಲ್ಲೂ ಇದ್ದು ಅನೇಕರನ್ನು ನಿಯಂತ್ರಿಸುತ್ತಿವೆ. Wangar Maathai ಅವರ 'ಗ್ರೀನ್ ಬೆಲ್ಟ್ ಚಳವಳಿ'ಯಂತಹ ಆಶಾದಾಯಕ ಹೋರಾಟಗಳಿಂದಾಗಿ ನಮ್ಮ ಧ್ವನಿ ಮತ್ತು ಹಕ್ಕುಗಳಿಗೆ ಪ್ರಾಶಸ್ತ್ಯ ದೊರೆಯುತ್ತಿದೆ.

**◆ ನಿಮ್ಮದು ಬಹುತೇಕ ಬುಡಕಟ್ಟುಗಳ ಸಮುದಾಯ. ಅವುಗಳ ನಡುವೆ ಸಾಂಸ್ಕೃತಿಕ ಕೊಡುಕೊಳ್ಳುವಿಕೆ ಹೇಗಿದೆ? ಸ್ವಲ್ಪ ವಿವರಿಸಿ.**

ಇತ್ತೀಚೆಗೆ Inter tribal ಮದುವೆಗಳು ಕೀನ್ಯಾದಲ್ಲಿ ಸಾಮಾನ್ಯ ಎನ್ನಬಹುದು. Tribalism ಅನ್ನೋದು ಹಳೆಯ ಮಾತು. ವಯಸ್ಸಿಗೆ ಬಂದ ಹುಡುಗ ಹುಡುಗಿಯರು, ಎರಡೂ ಕಡೆಯ ಬುಡಕಟ್ಟಿನ ಸಾಂಸ್ಕೃತಿಕ ವಿಶೇಷತೆಯನ್ನು ಎತ್ತಿ ಹಿಡಿಯುವ ಷರತ್ತಿಗೊಳಪಟ್ಟು ವಿವಾಹವಾಗುತ್ತಾರೆ. ಈ ಮೂಲಕ Tribal stereotypeಗಳನ್ನು ಬದಿಗೊತ್ತಿ ಸಾಂಸ್ಕೃತಿಕ ವಿನಿಮಯದ ಕಡೆಗೆ ಹೆಚ್ಚಿನ ಆಸಕ್ತಿ ವಹಿಸುತ್ತಾರೆ. Kikuyu, Kamba, Luo, Luhya ಮತ್ತಿತರ ಹಲವು ಸ್ಥಳೀಯ ಪಂಗಡಗಳಿಂದ ಸಮೃದ್ಧವಾದ ಜನ ಸಮುದಾಯ ನಮ್ಮದು. ಇಲ್ಲಿ ಸಾಂಸ್ಕೃತಿಕ ವಿನಿಮಯ ಅನ್ನೋದು ದೈನಂದಿನ ಜೀವನದ ಒಂದು ಜೀವಂತ ಭಾಗ. ಮದುವೆ ಎಂಬುದು ಈ ಕೊಡುಕೊಳ್ಳುವಿಕೆಯ ಅತ್ಯಂತ ಪ್ರಭಾವಶಾಲಿ ರೂಪಗಳಲ್ಲಿ ಒಂದು. ವಿಶೇಷವಾಗಿ ನಗರಗಳಲ್ಲಿ ಸಮುದಾಯಗಳ ನಡುವಿನ ಅಂತರ್ ವಿವಾಹಗಳು ಈಗ ಹೆಚ್ಚು ಸಾಮಾನ್ಯವಾಗಿವೆ. ಒಬ್ಬ Kikuyu ಬುಡಕಟ್ಟಿನವರು Luo ಬುಡಕಟ್ಟಿನವರನ್ನು ಅಥವಾ Luhya ಬುಡಕಟ್ಟಿನವರು, Kamba ಬುಡಕಟ್ಟಿನವರನ್ನು ಮದುವೆಯಾದಾಗ, ಅದು ಕೇವಲ ಇಬ್ಬರು ವ್ಯಕ್ತಿಗಳ ಮಿಲನವಾಗದೆ ಎರಡು ಸಂಸ್ಕೃತಿಗಳ ಆಹಾರ, ಭಾಷೆ, ಹಾಡು ಹಸೆ ಮತ್ತು ಪರಂಪರೆಗಳ ಬೆಸುಗೆಯಾಗುತ್ತದೆ. ಉದಾಹರಣೆಗೆ, ಅಬಗುಸಿ ಸಮುದಾಯಕ್ಕೆ ಸೇರಿದ ನನ್ನ ಚಿಕ್ಕಮ್ಮ ಲುವೋ ಸಮುದಾಯದ ವ್ಯಕ್ತಿಯೊಬ್ಬನನ್ನು ಪ್ರೀತಿಸಿ ಮದುವೆಯಾದಾಗ, ಆಕೆ ಮೊದಲು ಎರಡೂ ಕುಟುಂಬಗಳಿಂದ ಸಾಕಷ್ಟು ಪ್ರತಿರೋಧವನ್ನು ಎದುರಿಸಬೇಕಾಯಿತು. ವಧು ದಕ್ಷಿಣಾ ಪದ್ಧತಿಗಳ ಬಗ್ಗೆ ಎರಡು ಸಮುದಾಯಗಳಲ್ಲಿ ಭಿನ್ನ ಆಚರಣೆಗಳಿದ್ದವು. ಅಬಗುಸಿ ಸಂಪ್ರದಾಯದಲ್ಲಿ, ವಧುವಿನ ಬೆಲೆಯನ್ನು ಹಿರಿಯರೊಂದಿಗೆ ಚರ್ಚಿಸಿ ನಿರ್ಧರಿಸಲಾಗುತ್ತದೆ ಜೊತೆಗೆ ಜಾನುವಾರು ಮತ್ತಿತರ ಸಾಂಕೇತಿಕ ಉಡುಗೊರೆಗಳನ್ನು ವಿನಿಮಯ ಮಾಡಿಕೊಳ್ಳುವ ಪದ್ಧತಿಯನ್ನೂ ಅದು ಒಳಗೊಂಡಿರುತ್ತದೆ. ಆದರೆ ಲುವೋ ಸಮುದಾಯವು ಸಂಪೂರ್ಣವಾಗಿ ವಿಭಿನ್ನವಾದ ಪ್ರಕ್ರಿಯೆಯನ್ನು ಹೊಂದಿತ್ತು. ಇದು ಪಂಗಡಗಳ ನಡುವೆ ಉದ್ವಿಗ್ನತೆಗೆ ಕಾರಣವಾಯಿತು.

**◆ ನಿಮ್ಮ ಉತ್ತರ ನೋಡಿದ ಮೇಲೆ, ಶತಮಾನಗಳಿಂದ ಬೇರು ಬಿಟ್ಟು, ಈಗಲೂ ಪ್ರಭಾವಶಾಲಿಯಾಗಿರುವ ನಮ್ಮಲ್ಲಿನ ಜಾತಿಪದ್ಧತಿ ಎಂಬ ಅನಿಷ್ಟ ನೆನಪಾಗುತ್ತಿದೆ.**

ಹೌದು. ಅದರ ಬಗ್ಗೆ ಸಾಕಷ್ಟು ಕೇಳಿದ್ದೇನೆ ಮತ್ತೆ ಇಂಡಿಯಾದ ಜಾತಿ ಆಧಾರಿತ ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಯ ಕುರಿತು ಡಾ.ಬಿ.ಆರ್. ಅಂಬೇಡ್ಕರ್ ಅವರ ವಿಚಾರಗಳನ್ನು ಅಲ್ಪ ಸ್ವಲ್ಪ ಓದಿಕೊಂಡಿರುವೆ.

**◆ ಕೀನ್ಯಾದ ಹೊಸ ತಲೆಮಾರಿನ ಕಾವ್ಯದ ಸಂವೇದನೆ ಹಾಗೂ ಸ್ವರೂಪವೇನು?**

ಇತ್ತೀಚೆಗೆ ಕಾವ್ಯದಲ್ಲಿ ಹೆಚ್ಚಾಗಿ ಕಾಣುವ ಥೀಮುಗಳೆಂದರೆ ಅಸ್ಮಿತೆಯ ರಾಜಕಾರಣ, ನಿರ್ವಸಾಹತೀಕರಣ ಮತ್ತು ಪರಿಸರ ಪ್ರಜ್ಞೆ. ಹೆಚ್ಚಿನ ಬರಹಗಾರರು ಮುಕ್ತ ಛಂದಸ್ಸಿನಲ್ಲಿ ಬರೆಯುತ್ತಿದ್ದು, ವೈಯಕ್ತಿಕ ದನಿಗೆ ಹೆಚ್ಚು ಗಮನ ಕೊಡುತ್ತಾರೆ ಮತ್ತವರ ಬರಹಗಳಲ್ಲಿ ಸ್ವಹಿಲಿ ಪದ ನುಡಿಗಟ್ಟಗಳನ್ನು ಸೇರಿಸುತ್ತಾರೆ. ಈಗಿನ ಯುವ ಕವಿಗಳು ತಮ್ಮ ಬರವಣಿಗೆಯ ಮೂಲಕ ಅಂಜಿಕೆ, ಮುಲಾಜಿಲ್ಲದೆ ಭ್ರಷ್ಟ ನಾಯಕರನ್ನು ಎತ್ತಿ ತೋರಿಸುವ ಕೆಲಸ ಮಾಡ್ತಿರೋದು ಶ್ಲಾಘಿಸುವ ವಿಷಯ. ಇವರ ಭಾಷಾ ಬಳಕೆಯ ಆತ್ಮವಿಶ್ವಾಸ ಗಮನಿಸುವಂತಹದ್ದು. ನನಗೆ ಇಷ್ಟವಾಗುವ ಕೆಲವು ಮುಖ್ಯ ಹೆಸರುಗಳೆಂದರೆ, Gloria Nyagaka, Brandon Kiven, Kelvin Nyamache, Bonface Otieno ಇನ್ನೂ ಹಲವರಿದ್ದಾರೆ. ಅವರಲ್ಲಿ ಪ್ರತಿಯೊಬ್ಬರೂ ನಿಜವಾದ ಪ್ರಾಮಾಣಿಕತೆ ಮತ್ತು ಅಪರೂಪದ ಎದೆಗಾರಿಕೆಯಿಂದ ಬರೆಯುತ್ತಾರೆ.